ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ **26.03.2022**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಸಿ.ಬಿ ವಕೀಲರಿಂದಃ

ನನ್ನ ಅಜ್ಜನ ಹೆಸರು ರುದ್ರಪ್ಪ. ನನ್ನ ಅಜ್ಜ ರುದ್ರಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು **1961** ರಲ್ಲಿ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ರುದ್ರಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು **5** ಜನ ಮಕ್ಕಳಿದ್ದು, ಅವರುಗಳು ನನ್ನ ತಂದೆ ಕೊಟ್ರಪ್ಪ, ವೀರಬಸಪ್ಪ, ಶಿವಪ್ಪ, ವೀರಭದ್ರಪ್ಪ ಮತ್ತು ಈರಪ್ಪ ಆಗಿರುತ್ತಾರೆ. ನನ್ನ ತಂದೆಗೆ ಒಬ್ಬಳು ಸಹೋದರಿ ಸಹ ಇದ್ದಳು ಮತ್ತು ಆಕೆಯ ಹೆಸರು ನಾಗಮ್ಮ ಆಗಿರುತ್ತದೆ ಎಂದರೆ ಸರಿ. ಸದರಿ ನಾಗಮ್ಮಳನ್ನು ಎಲ್ಲಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ಭಾರಂಗಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹೋದರರಾದ ವೀರಬಸಪ್ಪ ಮತ್ತು ಈರಪ್ಪ ರವರನ್ನು ದತ್ತಕಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಸಹೋದರರಾದ ವೀರಬಸಪ್ಪ ಮತ್ತು ಈರಪ್ಪ ರವರು ದತ್ತಕಕ್ಕೆ ಹೋದ ನಂತರ ನನ್ನ ತಂದೆ ಹಾಗೂ ಇನ್ನಿಬ್ಬರು ಸಹೋದರರಾದ ಶಿವಪ್ಪ ಮತ್ತು ವೀರಭದ್ರಪ್ಪ ರವರು ಒಟ್ಟು ಕುಟುಂಬದಲ್ಲಿ ಮುಂದುವರೆದುಕೊಂಡು ಬಂದಿದ್ದರು ಎಂದರೆ ಸರಿ.

ನನ್ನ ಅಜ್ಜ ರುದ್ರಪ್ಪ ರವರು ಅವರ ಜೀವಂತ ಕಾಲಕ್ಕೆ ಅವರೇ ಕುಟುಂಬದ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸ್ವಲ್ಪ ದಿನದವರೆಗೆ ಅವರು ಮಾಡುತ್ತಿದ್ದು, ನಂತರ ನನ್ನ ತಂದೆಯವರು ಮಾಡುತ್ತಿದ್ದರು ಹಾಗೂ **1956** ನೇ ಇಸವಿಯಲ್ಲಿ ನನ್ನ ತಂದೆ ಹಾಗೂ ಆತನ ಇಬ್ಬರು ಸಹೋದರರು ಪ್ರತ್ಯೇಕವಾಗಿ ಭಾಗ ಆಗಿರುತ್ತಾರೆ ಎಂದು ನುಡಿಯುತ್ತಾರೆ. **1956** ನೇ ಇಸವಿಯಲ್ಲಿ ನನ್ನ ತಂದೆ ಹಾಗೂ ಆತನ ಸಹೋದರರು ಪ್ರತ್ಯೇಕ ಭಾಗವಾದ ಬಗ್ಗೆ ದಾಖಲೆಗಳು ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು, ಆದರೆ ಗ್ರಾಮಸ್ಥರ ಮುಖಂಡರ ಸಮ್ಮುಖದಲ್ಲಿ ಆಗಿದ್ದು, ತದನಂತರ ಅವರವರ ಹೆಸರಿಗೆ ಪಹಣಿ ಹಾಗೂ ಖಾನೇಷುಮಾರಿ ದಾಖಲಾತಿಗಳು ಬದಲಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಬಿ.ಎಸ್.ಸಿ ಪದವಿಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಹಿಯನ್ನು ಇಂಗ್ಲೀಷಿನಲ್ಲಿ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕನ್ನಡದಲ್ಲೂ ಸಹ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ವಾದ ಪತ್ರದ

ಮೊದಲನೇ ಪುಟವನ್ನು ತೋರಿಸಿ ಅವರ ಸಹಿಯನ್ನು ಇದೆ ಎಂದು ಹೇಳಿದಾಗ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ಈಗ ಒಂದು ವಿಭಾಗ ಪತ್ರವನ್ನು ತೋರಿಸಿ ಅದರ ಮೊದಲನೇ ಪುಟದಲ್ಲಿ ತಮ್ಮ ಸಹಿಯನ್ನು ತೋರಿಸಿ ಎಂದು ಹೇಳಿದಾಗ ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಯನ್ನು ನಿಡಿ 1 ಎಂದು, ಸಾಕ್ಷಿಯ ಸಹಿಯನ್ನು ನಿಡಿ 1 ಎ ಎಂದು, ವಾದಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ನಿಶಾನೆಗೊಳಿಸಲಾಯಿತು.

ನಿಪಿ 7 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಗೆ ಈಗ ಒಂದು ಮ್ಯುಟೇಷನ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್ ನ ದೃಡೀಕೃತ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಸದರಿ ಮ್ಯುಟೇಷನ್ ರಿಜೆಕ್ಟ್ ಆಗಿರುತ್ತದೆ ಎಂದು ನುಡಿಯುತ್ತಾರೆ ಹಾಗೂ ನಾನು ಕ್ರಯಕ್ಕೆ ಪಡೆದುಕೊಂಡ ಮೊದಲು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮ್ಯುಟೇಷನ್ ಎಕ್ಸ್‌ಟ್ರಾಕ್ಟ್ ನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 1994–95 ರಿಂದ 1999–2000 ನ ಸರ್ವೆ ನಂಬರ್ 116/1 ಕ್ಕೆ ಸಂಬಂಧಿಸಿದ ಆರ್.ಟಿ.ಸಿ ಯ ದೃಡೀಕೃತ ಪ್ರತಿಯನ್ನು ತೋರಿಸಿದ್ದು, ನನ್ನ ಹಾಗೂ ನನ್ನ ಚಿಕ್ಕಪ್ಪಂದಿರಾದ ವೀರಭದ್ರಪ್ಪ, ಶಿವಪ್ಪ ಹಾಗೂ ಈರಪ್ಪ ರವರ ಹೆಸರು ಕಾಲಂ ನಂಬರ್ 12 ರಲ್ಲಿ ಇದೆ ಎಂದು ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಸದರಿ ಆರ್.ಟಿ.ಸಿ ಪ್ರತಿಯನ್ನು ನಿಡಿ 3 ಎಂದು ಗುರುತಿಸಲಾಯಿತು. ನನ್ನ ತಂದೆ ಕೊಟ್ರಪ್ಪ ನನ್ನ ಅಜ್ಜ ರುದ್ರಪ್ಪ ಬದುಕಿರುವ ಕಾಲಕ್ಕೆ ಮನೆ ವ್ಯವಹಾರ ಮಾಡುತ್ತಿದ್ದರಾ ಅಥವಾ ನನ್ನ ಅಜ್ಜ ರುದ್ರಪ್ಪ ತೀರಿಕೊಂಡ ನಂತರ ಮನೆ ವ್ಯವಹಾರ ಮಾಡುತ್ತಿದ್ದರಾ ಎಂದರೆ ಸಾಕ್ಷಿಯು ನನ್ನ ಅಜ್ಜ ರುದ್ರಪ್ಪ ಇರುವಾಗಲೇ ಕುಟುಂಬದ ಸ್ವತ್ತುಗಳನ್ನು ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ನಾನು 1943 ನೇ ಇಸವಿಯಲ್ಲಿ ಜನಿಸಿರುತ್ತೇನೆ. 1956 ನೇ ಇಸವಿಯಲ್ಲಿ ಹಿಸ್ಸಾ ಆಗಿದೆ ಎಂದು ಹೇಳುವ ಕಾಲಕ್ಕೆ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಎಂದರೆ ಸರಿ. ಯಾವ ಯಾವ ಸರ್ವೆ ನಂಬರ್ ನಲ್ಲಿ ಯಾರ್ಯಾರಿಗೆ ಜಮೀನು ಹೋಗಿದೆ ಎಂದು ಹೇಳುವಿರಾ ಎಂದರೆ ಸಾಕ್ಷಿಯು ಪತ್ರ ನೋಡಿದರೆ ಹೇಳುತ್ತೇನೆ ಎಂದು ನುಡಿಯುತ್ತಾರೆ. ಸದರಿ ಹಿಸ್ಸಾ ಪತ್ರವನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅದು ನನ್ನ ಬಳಿ ಇಲ್ಲ, ಹಾಗೇ ಮೌಖಿಕವಾಗಿ ಹೇಳಬಹುದು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಹಿಸ್ಸೆಯಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಹಿಸ್ಸೆ ಹೋಗಿದೆ ಎಂದು ಹೇಳುವಿರಾ ಎಂದರೆ ಸಾಕ್ಷಿಯು ನನ್ನ ತಂದೆಯ ಅಣ್ಣ ತಮ್ಮಂದಿರು ತಲಾ 1/3 ನೇ ಭಾಗ ಹಿಸ್ಸೆಯನ್ನು ಕುಟುಂಬದ ಸ್ವತ್ತುಗಳಲ್ಲಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ರುದ್ರಪ್ಪನಿಗೆ ಕುಟುಂಬದ ಹಿಸ್ಸೆಯಲ್ಲಿ ಆಸ್ತಿಯನ್ನು ಬಿಟ್ಟಿದ್ದಿರಾ ಎಂದರೆ ಸಾಕ್ಷಿಯು

ಸರ್ವೆ ನಂಬರ್ **95** ರಲ್ಲಿ **33** ಗುಂಟೆ ಜಮೀನನ್ನು ಅವರ ಜೀವನಾಂಶಕ್ಕಾಗಿ ಬಿಟ್ಟಿದ್ದರು ಎಂದು ನುಡಿಯುತ್ತಾರೆ. ಸರ್ವೆ ನಂಬರ್ **146/1** ರ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ **1** ರವರ ಮಗನ ವಿರುದ್ಧ ಪ್ರಧಾನ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅ.ದಾ ಸಂಖ್ಯೆ **169/15** ರಲ್ಲಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ್ **89** ಕ್ಕೆ ಸಂಬಂಧಿಸಿದಂತೆ ಈ ದಾವೆಯ **3** ನೇ ಪ್ರತಿವಾದಿಯ ವಿರುದ್ಧ ಸೊರಬ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅ.ದಾ ಸಂಖ್ಯೆ **92/19** ರಲ್ಲಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ.

ನಮ್ಮ ಕುಟುಂಬದಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ನಾನೇ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾವು ಪ್ರತ್ಯೇಕವಾದ ನಂತರ ಓದಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ **2** ಮತ್ತು **3** ರವರು ನನ್ನ ಚಿಕ್ಕಪ್ಪನ ಮಕ್ಕಳು ಎಂದರೆ ಸರಿ. ನಾನು ವಿದ್ಯಾಭ್ಯಾಸ ಮುಗಿಸಿದ ನಂತರ ಕೃಷಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಕಂಟ್ರಾಕ್ಟರ್ ಹಾಗೂ ಕೃಷಿ ಕೆಲಸ ಎರಡನ್ನೂ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ತಂದೆ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು **1978** ರಲ್ಲಿ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಳ್ಳುವವರೆಗೆ ಆತನ ಸಹೋದರರಾದ ಶಿವಪ್ಪ ಮತ್ತು ವೀರಭದ್ರಪ್ಪ ಒಟ್ಟಿಗೆ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು **1956** ನೇ ಇಸವಿಯಲ್ಲೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹೋದರರಾದ ಶಿವಪ್ಪ ಮತ್ತು ವೀರಭದ್ರಪ್ಪ ರವರು ನಾನು ಕಂಟ್ರಾಕ್ಟರ್ ಆಗಿ ಕೆಲಸಕ್ಕೆ ಹೋದ ನಂತರ ಕೃಷಿಯನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಶಿವಪ್ಪ ಮತ್ತು ವೀರಭದ್ರಪ್ಪ ರವರಿಗೆ ವ್ಯವಹಾರ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ.

**1978** ರ ನಂತರ ನಾನು ಒಟ್ಟು ಕುಟುಂಬದ ವ್ಯವಹಾರವನ್ನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಿಡಿ **2** ದಾಖಲಾತಿಯನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು**,** ನಾನು ಕ್ರಯಕ್ಕೆ ದಾವಾ ಸ್ವತ್ತನ್ನು ಪಡೆಯುವ ಮುನ್ನವೇ ಅದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ **5** ದಾಖಲಾತಿಯನ್ನು ಯಾವ ಉದ್ದೇಶಕ್ಕಾಗಿ ಹಾಕಿದ್ದೀರಿ ಎಂದರೆ ಸಾಕ್ಷಿಯು ಸರ್ವೆ ನಂಬರ್ **116/1** ರಲ್ಲಿ **2** ಎಕರೆ **12** ಗುಂಟೆ ಸ್ವತ್ತನ್ನು ನಾನು ಖರೀದಿಸಿದ್ದು, ಅದನ್ನು ಖಾತೆ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದಕ್ಕೆ ನೀಡಿರುವ ಸ್ವೀಕೃತಿ ಎಂದು ನುಡಿಯುತ್ತಾರೆ. ನಿಪಿ **5** ನ್ನು ನೀಡುವ ಕಾಲಕ್ಕೆ ನನಗೆ ಖಾತೆ ಬದಲಾವಣೆ ಆಗಿರುವ ವಿಚಾರ ಗೊತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಲೆಂದೇ ಅರ್ಜಿಯನ್ನು ನೀಡಿದ್ದೆ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು)**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).

ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

**ಅಪರ** ಸಿವಿಲ್ ನ್ಯಾ. ಮತ್ತು ಜೆ ಎಂ ಎಫ್ ಸಿ, **ಸೊರಬ**